ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘ

239 (626) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ 2001–02 ರಿಂದ 2009–10ರ ವರೆಗೆ ಎಷ್ಟು ವರ್ಷಗಳ ಕಾಲ ಆಡಿಟ್ ಜರುಗಿದೆ ; ಈ ಆಡಿಟ್ ನಡೆಸಿರುವ ಅಧಿಕಾರಿಗಳ ವಿವರಗಳನ್ನು ನೀಡುವುದು ;

ಆ) ಈ ಸಂಸ್ಥೆಯಲ್ಲಿ ಆಡಿಟ್ ಕೈಗೊಂಡಿರುವ ಲೆಕ್ಕಪರಿಶೋಧಕರು ಹಾಗೂ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜೇಷ್ಠತೆಯನ್ನು ಉಲ್ಲಂಘಿಸಿ ಹಾಗೂ ವಂಚಿಸಿ ಅವರ ಹಾಗೂ ಸಂಬಂಧಿಗಳ ಹೆಸರುಗಳಲ್ಲಿ ನಿವೇಶನಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ನಿವೇಶನ ಪಡೆದಿರುವವರ ಹೆಸರು, ಹುದ್ದೆ ಮತ್ತು ವಿಳಾಸ ಸಹಿತ ಪೂರ್ಣ ಮಾಹಿತಿ ನೀಡುವುದು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) 2001–02 ರಿಂದ 2005–06ರ ಸಾಲಿನವರೆಗೆ ಲೆಕ್ಕಪರಿಶೋಧನೆ ಕೈಗೊಂಡಿದ್ದು, ಸದರಿ ಲೆಕ್ಕಪರಿಶೋಧನೆ ಕೈಗೊಂಡ ಲೆಕ್ಕಪರಿಶೋಧಕರ ವಿವರಗಳು ಕೆಳಗಿನಂತಿದೆ.

ಕ್ರ. ಸಂ.	ಸಾಲು	ಲೆಕ್ಕಪರಿಶೋಧಕರ ವಿವರ
1	2001–02	ಶ್ರೀ ಟಿ.ಕೆ. ಭಾಸ್ಕರರಾವ್, ಹಿರಿಯ ಲೆಕ್ಕಪರಿಶೋಧಕರು, ಬೆಂಗಳೂರು 1ನೇ ವೃತ್ತ, ಬೆಂಗಳೂರು

ಕ್ರ ಸಂ.	ಸಾಲು	ಲೆಕ್ಕಪರಿಶೋಧಕರ ವಿವರ
2	2002–03	ಶ್ರೀ ಆರ್.ಪಿ. ದೀನ್, ಲೆಕ್ಕಪರಿಶೋಧಕರು, ಬೆಂಗಳೂರು 1ನೇ ವೃತ್ತ, ಬೆಂಗಳೂರು.
3	2003–04	ಶ್ರೀ ಎಂ. ಮುನಿಯಪ್ಪ, ಹಿರಿಯ ಲೆಕ್ಕಪರಿಶೋಧಕರು, ಬೆಂಗಳೂರು 1ನೇ ವೃತ್ತ, ಬೆಂಗಳೂರು
4	2004–05	ಶ್ರೀ ಬಿ.ಸಿ. ಸೋಮಶೇಖರಯ್ಯ, ಹಿರಿಯ ಲೆಕ್ಕಪರಿಶೋಧಕರು, ಬೆಂಗಳೂರು 1ನೇ ವೃತ್ತ, ಬೆಂಗಳೂರು
5	2005–06	ಶ್ರೀ ಎಂ. ಕೆಂಪಯ್ಯ, ಸಹಾಯಕ ನಿರ್ದೇಶಕರು, ಬೆಂಗಳೂರು 1ನೇ ವೃತ್ತ, ಬೆಂಗಳೂರು (ನಿವೃತ್ತ)

ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘದ ಲೆಕ್ಕಪತ್ರಗಳು 2001–02 ರಿಂದ 2005–06ರವರೆಗಿನ 5 ವರ್ಷಗಳ ಅವಧಿಗೆ ಲೆಕ್ಕಪರಿಶೋಧನೆ ನಡೆಸಲಾಗಿದೆ. ಸಂಘವು ಲೆಕ್ಕ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದ ಕಾರಣ 2006–07 ರಿಂದ 2009–10ನೇ ಸಾಲಿನವರೆಗಿನ ಲೆಕ್ಕಪರಿಶೋಧನೆ ಜರುಗಿರುವುದಿಲ್ಲ.

ಆ) ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘದ ಆಡಿಟ್ ಕೈಗೊಂಡಿದ್ದ ಲೆಕ್ಕಪರಿಶೋಧಕರು ಹಾಗೂ ಇಲಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಜ್ಯೇಷ್ಠತೆಯನ್ನು ಉಲ್ಲಂಘಿಸಿ, ವಂಚಿಸಿ ಅವರ ಸಂಬಂಧಿಗಳ ಹೆಸರಿನಲ್ಲಿ ನಿವೇಶನಗಳನ್ನು ಪಡೆದಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆದರೆ ಸಂಘದ ಅಸಮರ್ಪಕ ಕಾರ್ಯನಿರ್ವಹಣೆ ಹಾಗೂ ನಿವೇಶನಗಳ ಹಂಚಿಕೆಯಲ್ಲಿ ಹಲವಾರು ಅವ್ಯವಹಾರಗಳು ನಡೆದಿರುವ ಬಗ್ಗೆ, ನಿವೇಶನ ಠೇವಣಿ ಪಡೆದು ನಿವೇಶನ ನೀಡದೆ ವಂಚಿಸಿರುವ ಬಗ್ಗೆ, ಹಂಚಿಕೆಯಾಗಿದ್ದ ನಿವೇಶನಗಳನ್ನು ಬೇರೋಬ್ಬರಿಗೆ ಮಾರಾಟ ಮಾಡಿರುವ ಬಗ್ಗೆ, ಜ್ಯೇಷ್ಠತೆಯಲ್ಲಿ ಹಿರಿಯರಾಗಿದ್ದವರನ್ನೂ ಕಡೆಗಣಿಸಿ ಜ್ಯೇಷ್ಠತೆಯನ್ನು ಅನುಸರಿಸದೆ ಹೆಚ್ಚಿನ ಹಣ ಪಡೆದು ತಮ್ಮಿಷ್ಟ ಬಂದವರಿಗೆ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ, ಠೇವಣಿ ಹಣ ಪಾವತಿಸಿದವರು ಠೇವಣಿ ಹಣ ವಾಪಸ್ ನೀಡುವಂತೆ ಕೋರಿದವರಿಗೆ ಠೇವಣಿ ಹಣ ವಾಪಸ್ಸು ಮಾಡದಿರುವ ಬಗ್ಗೆ, ಸದಸ್ಯರಿಂದ ಅನಧಿಕೃತವಾಗಿ ವಿಶ್ವಭಾರತಿ ಹೌಸಿಂಗ್ ಕಾಂಪ್ಲೆಕ್ಸ್ ಹಾಗೂ ವಿಶ್ವಭಾರತಿ ಹೌಸಿಂಗ್ ಪ್ರಾಜೆಕ್ಟ್ ಹೆಸರಿನಲ್ಲಿ ಹಣ ಸಂಗ್ರಹಿಸಿ ಸದಸ್ಯರಿಗೆ ವಂಚಿಸಿರುವ ಬಗ್ಗೆ, ಹಾಗೂ ಇನ್ನಿತರೆ ಗಂಭೀರ ಸ್ವರೂಪದ ಲೋಪದೋಷಗಳನ್ನು ಎಸಗಿರುವ ಬಗ್ಗೆ ದೂರುಗಳು ಬಂದಿದ್ದ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರಡಿ ವಿಚಾರಣೆಗೆ ಆದೇಶಿಸಲಾಗಿದೆ.

ಸಂಘದ ಹಿಂದಿನ ಅಧ್ಯಕ್ಷರಾದ ಶ್ರೀ ಬಿ. ಕೃಷ್ಣಭಟ್ ರವರು ತಮ್ಮ ವಶದಲ್ಲಿ ಸಂಘದ ಎಲ್ಲಾ ದಾಖಲಾತಿಗಳನ್ನು ಇಟ್ಟುಕೊಂಡಿದ್ದು, ಸಂಘಕ್ಕೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಈ ಕುರಿತು ಪ್ರಕರಣ 64ರ ವಿಚಾರಣೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಹಲವಾರು ಬಾಕಿ ನೋಟೀಸ್ ನೀಡಿದ್ದರೂ ಹಿಂದಿನ ಅಧ್ಯಕ್ಷರಾದ ಶ್ರೀ ಬಿ. ಕೃಷ್ಣಭಟ್‌ರವರು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕುರಿತು ಪ್ರಕರಣ 109ರಡಿ ಕ್ರಮವಿಟ್ಟು ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಐ.ಪಿ.ಸಿ. 420 ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 109(9)ರಡಿ ಕ್ರೈಂ ನಂ. 0172/2010, ದಿನಾಂಕ: 13.5.2010ರನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿ ಅದನ್ನು ಶ್ರೀ ಕೃಷ್ಣಭಟ್‌ರವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು,

ಮೊಕದ್ದಮೆ ದಾಖಲಿಸಿರುವುದನ್ನು ರದ್ದುಗೊಳಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 29ಸಿ ರಡಿ ಶ್ರೀ ಕೃಷ್ಣಭಟ್‌ರನ್ನು ಅಧ್ಯಕ್ಷ ಸ್ಥಾನದಿಂದ ಅನರ್ಹಗೊಳಿಸಲಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ

240 (288) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ; ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ; ಎಷ್ಟು ಕಾಲಮಿತಿಯೊಳಗೆ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಮಾಗಡಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿನ ಕೆಲವು ರಸ್ತೆಗಳ ಕೆಲವು ಭಾಗಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 2010-11ನೇ ಸಾಲಿನ ಆಯವ್ಯಯದಲ್ಲಿ 5054 ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುಮೋದನೆಯಾಗಿರುವ 79 ಕಾಮಗಾರಿಗಳು, ನಬಾರ್ಡ್-15ರ ಯೋಜನೆಯಡಿ 2 ಕಾಮಗಾರಿಗಳು, 2010-11ನೇ ಸಾಲಿನಲ್ಲಿ ಸುವರ್ಣ ವಿಕಾಸ ಯೋಜನೆಯಡಿ-1 ಕಾಮಗಾರಿ ಮತ್ತು ಡಾ: ಡಿ.ಎಂ. ನಂಜುಂಡಪ್ಪ ವರದಿ ಯೋಜನೆಯಡಿ-4 ಕಾಮಗಾರಿಗಳು ಒಳಗೊಂಡಂತೆ ಒಟ್ಟಾರೆ